

ಉರ್ಮಿ ಬಂದಿದ್ದಳು. ಮನೆಯ ಹಿಂದಕ್ಕೊಂದು ಎತ್ತರದ ಗುಡ್ಡ ಮತ್ತು ಗುಡ್ಡದ ನೆತ್ತಿಯಲ್ಲಿ ಒಂದು ಸಮತಟ್ಟು ಕಣವಿತ್ತು. ಊರಿನ ಅನೇಕರು ಅಲ್ಲಿ ಬಿಸಿಲಿಗೆ ಅಡಿಕೆ ಒಣಗಿಸುತ್ತಿದ್ದರು. ಸಿಗಂದೂರು ಅಮ್ಮನ ಕಣ್ಗಾವಲ ಬೋರ್ಡಿನ ಜತೆಗೆ ಆ ಜಾಗದಲ್ಲಿ ಸಿ.ಸಿ ಕ್ಯಾಮೆರಾ ಅಳವಡಿಕೆಯಿದ್ದರೂ, ಅಡಿಕೆಯ ವಾರಸುದಾರರು ಸದಾ ಅಲ್ಲಿ ಇರುತ್ತಿದ್ದರು. ಉರ್ಮಿ ಬಂದಿರುವ ಮನೆಯ ನೋಟ ಅಲ್ಲಿಂದ ಚೆನ್ನಾಗಿ ಕಾಣುತ್ತಿತ್ತು.

ಉರ್ಮಿ ಬಂದ ಮರುಕ್ಷಣವೇ ಯಾವುದೋ ಹೊಸ ಹುಡುಗಿಯ ಆಗಮನವಾಗಿದೆಯೆಂದೂ, ಇಂಥವರ ಮನೆಗೆ, ಇಂಥವರ ಜತೆ ಇಂಥಾ ಹೊತ್ತಲ್ಲಿ ಮನೆ ಪ್ರವೇಶವಾಗಿದೆಯೆಂದೂ ಸುದ್ದಿಯಾಗಿತ್ತು. ಎಲೆಯಡಿಕೆಯ, ನೀರಡಿಕೆಯ ಅಥವಾ ಇನ್ನಾವುದೋ ಕುಂಟು ನೆಪಮಾಡಿಕೊಂಡು ಮನೆ ಬಾಗಿಲಿಗೆ ಬಂದು ಒಳಗೆಲ್ಲಾ ಇಣಕಿನೋಡುವ ಜನರೂ ಅಲ್ಲಿದ್ದರು. ಮನೆ ಹಿಂದಿನ ಕಣದಲ್ಲೂ ಚಟುವಟಿಕೆ ಹೆಚ್ಚಾಗಿತ್ತು. ಆ ಮನೆಯ ಪುಟ್ಟ ಯಾರನ್ನೋ ಮದುವೆ ಮಾಡಿಕೊಂಡು ಕರೆತಂದಿದ್ದಾನೆಂದೂ ಗುಸುಗುಸು ಹಬ್ಬಿತ್ತು. ಇದನ್ನೆಲ್ಲಾ ಕಿರಿಹಿಡಿದು ಗಮನಿಸಿದ್ದ ಪುಟ್ಟನ ದೊಡ್ಡಣ್ಣ ಉರ್ಮಿಗೆ ಹೊರಗಡೆ ತಿರುಗಾಡುವುದನ್ನು ಕಡಿಮೆ ಮಾಡು ಎಂದಿದ್ದ.

ಉರ್ಮಿಗೆ ಊರನ್ನು ನೋಡುವ ತಿಳಿಯಾಸೆ ಮತ್ತು ಜನರ ನಡೆನುಡಿ ಅರಿಯುವ ಇರಾದೆಯಿತ್ತು. ಬಂದ ದಿನ ಸಂಜೆಯೇ ಮನೆ ಹಿಂದಣ ಗುಡ್ಡ ತೋರಿಸುತ್ತೇನೆಂದು ಪುಟ್ಟ, ಉರ್ಮಿಯನ್ನು ಕರೆದುಕೊಂಡು ಹೊರಟ. ಮಲೆನಾಡ ಬೆಟ್ಟವೇರಿ, ಅಗಳ ಹಾರಿ ಗೊತ್ತಿರದ ಉರ್ಮಿ ಹರಸಾಹಸ ಮಾಡಿ ಗುಡ್ಡ ಹತ್ತಿದ್ದಳು. ಸಣ್ಣ ಮುಳ್ಳಿನ ಗಿಡಗಳೂ ಆಕೆಗೆ ಚೂಪು ಬಾಣವನ್ನು ಹೆದೆಯೇರಿಸಿ ಯುದ್ಧಕ್ಕೆ ನಿಂತ ಬಿಲ್ಲುಗಾರರಂತೆ ಕಾಣಿಸುತ್ತಿತ್ತು. ಲಂಟಾನ ಕಡ್ಡಿಗಳು ಆಕೆಯ ಮೈಕೈಗೆಲ್ಲಾ ತಾಕಿ ಸಾಕಷ್ಟು ತರಚಿದ ಗಾಯ ಮಾಡಿಕೊಂಡಿದ್ದಳು. ಪ್ರಯಾಸದಿಂದ ಗುಡ್ಡಹತ್ತಿ ಕಷ್ಟದಲ್ಲಿ ಮುಳ್ಳುತಂತಿ ಬೇಲಿಯೊಂದನ್ನು ದಾಟಿ ಅಡಿಕೆ ಕಣಕ್ಕೆ ಉರ್ಮಿ ನಡೆದಿದ್ದಳು. ಸಾಲದ್ದಕ್ಕೆ ಆಕೆಯ